# ಕರ್ನಾಟಕ ಸರ್ಕಾರ

## ಕರ್ನಾಟಕ ವಿಧಾನ ಪರಿಷತ್ತು
## 150ನೇ ಅಧಿವೇಶನ-2023

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 353(497) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಕೆ. ಹರೀಶ್ ಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : | ಅರಣ್ಯ, ಜೀವಿಪರಿಸ್ಥಿತಿ ಹಾಗೂ ಪರಿಸರ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 10.03.2023 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರೈತರು ಕುಡಿಯುವ ಬಾವಿಯ ನೀರು ಕಲುಷಿತವಾಗಿರುವ ಬಗ್ಗೆ ಪ್ರಾದೇಶಿಕ ಕಛೇರಿ, ಕೆ.ಎಸ್.ಪಿ.ಸಿ.ಬಿ. ಉಡುಪಿ ಇವರಿಗೆ ಹಲವು ಬಾರಿ ಸಾರ್ವಜನಿಕರಿಂದ ದೂರು ಬಂದಿರುವುದು ನಿಜವೇ; ಈ ಕುರಿತು ದಿನಾಂಕ:19.09.2022 ರಂದು ಹಿರಿಯ ಪರಿಸರ ಅಧಿಕಾರಿ ಕೆ.ಎಸ್.ಪಿ.ಸಿ.ಬಿ. ಮಂಗಳೂರು ಇವರು ಅಧ್ಯಕ್ಷರು ಹಾಗೂ ಸದಸ್ಯ ಕಾರ್ಯದರ್ಶಿ, ಕೆ.ಎಸ್.ಪಿ.ಸಿ.ಬಿ. ಬೆಂಗಳೂರು ಇವರಿಗೆ ಕ್ರಿಮಿನಲ್ ಪ್ರಕರಣ ದಾಖಲಿಸಲು ಆಡಳಿತಾತ್ಮಕ ಅನುಮೋದನೆ ನೀಡುವಂತೆ ಕೋರಿ ಪತ್ರ ಸಲ್ಲಿಸಿರುವುದು ನಿಜವೇ; | ರೈತರು ಕುಡಿಯುವ ಬಾವಿಯ ನೀರು ಕಲುಷಿತವಾಗಿರುವ ಬಗ್ಗೆ ಪ್ರಾದೇಶಿಕ ಕಛೇರಿ ಕೆ.ಎಸ್.ಪಿ.ಸಿ.ಬಿ ಉಡುಪಿ ಇವರಿಗೆ ಹಲವು ಬಾರಿ ಸಾರ್ವಜನಿಕರಿಂದ ದೂರು ಬಂದಿರುತ್ತದೆ. ಈ ಕುರಿತು ಪ್ರಾದೇಶಿಕ ಕಛೇರಿ, ಉಡುಪಿಯ ವತಿಯಿಂದ ಉದ್ದಿಮೆಯ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಲು ನಿರ್ದೇಶನ ನೀಡಲಾಗಿದೆ. |
| (ಆ) | ಹಾಗಿದ್ದಲ್ಲಿ, ಅನುಮೋದನೆ ನೀಡಲಾಗಿದೆಯೆ; ಹೌದಾದಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಲು ಇದುವರೆವಿಗೂ ಯಾವುದೇ ಕ್ರಮ ಕೈಗೊಳ್ಳದಿರಲು ಕಾರಣವೇನು; | ಪ್ರಾದೇಶಿಕ ಕಛೇರಿ, ಉಡುಪಿಯ ಶಿಫಾರಸ್ಸಿನ ಮೇರೆಗೆ ದಿನಾಂಕ: 25.04.2023 ರಂದು ಮಂಡಳಿಯ ಅಧ್ಯಕ್ಷರಿಂದ ಉದ್ದಿಮೆಯ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಲು ಅನುಮೋದನೆ ನೀಡಲಾಗಿರುತ್ತದೆ. ಆದರೆ, ಸದರಿ ಉದ್ದಿಮೆಯು ಬಿಳಿ ಪ್ರವರ್ಗದ ವ್ಯಾಪ್ತಿಗೆ |

| | | |
|---|---|---|
| | | ಒಳಪಡುತ್ತಿದ್ದು, ಇದರ ದೈನಂದಿನ ಕಾರ್ಯನಿರ್ವಹಣೆಗೆ ಮಂಡಳಿಯಿಂದ ಸಮ್ಮತಿ ಪಡೆಯಬೇಕಾದ ಅವಶ್ಯಕತೆಯಿರುವುದಿಲ್ಲ. ಇದೊಂದು ಸಾವಯವ ಗೊಬ್ಬರ ತಯಾರು ಮಾಡುವ ಸಣ್ಣ ಪ್ರಮಾಣದ ಉದ್ದಿಮೆಯಾಗಿರುತ್ತದೆ. ಆದಾಗ್ಯೂ, ಪ್ರಾದೇಶಿಕ ಕಛೇರಿಯವತಿಯಿಂದ ಉದ್ದಿಮೆಯ ಆವರಣ ಹಾಗು ಸುತ್ತಮುತ್ತಲಿನ ತೆರೆದ ಬಾವಿಯ ನೀರಿನ ಮಾದರಿಯನ್ನು ಸಂಗ್ರಹಿಸಿ ವಿಶ್ಲೇಷಣೆಗೊಳಪಡಿಸಲಾಗಿದ್ದು, ಸದರಿ ಬಾವಿಗಳ ನೀರು ಕಲುಷಿತಗೊಂಡಿರುವುದಿಲ್ಲ. ಆ ಪ್ರಕಾರ ಈ ಉದ್ದಿಮೆಯಿಂದ ಪರಿಸರ ಮಾಲಿನ್ಯವಾಗುತ್ತಿರುವ ಹಾಲಿ ಪರಿಸ್ಥಿತಿಯಲ್ಲಿ ಸೂಕ್ತ ಪುರಾವೆ ಹಾಗು ಆಧಾರಗಳಿರುವುದಿಲ್ಲ ಹಾಗೂ ಈ ಉದ್ದಿಮೆಯು ಬಿಳಿಯ ಪ್ರವರ್ಗಕ್ಕೆ ಒಳಪಡುತ್ತಿದ್ದು, ಇದರ ದೈನಂದಿನ ಕಾರ್ಯನಿರ್ವಹಣೆಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಯಾವುದೇ ಸಮ್ಮತಿ ಪಡೆಯಬೇಕಾದ ಅವಶ್ಯಕತೆಯಿರುವುದಿಲ್ಲ. ಆದ್ದರಿಂದ ಈ ಉದ್ದಿಮೆಯ ಮೇಲೆ ಮತ್ತಷ್ಟು ಸ್ಪಷ್ಟವಾದ ಪುರಾವೆಗಳನ್ನು ಸಂಗ್ರಹಿಸಲು ಕ್ರಮವಹಿಸಲಾಗುತ್ತಿದೆ. |
| (ಇ) | ಕುಡಿಯುವ ನೀರು ಹಾಗೂ ಪರಿಸರ ಮಾಲಿನ್ಯದಿಂದ ಮುಂದೆ ಆಗುವ ಅನಾಹುತ ತಪ್ಪಿಸಲು ಸರ್ಕಾರ ತೆಗೆದುಕೊಳ್ಳುವ ಕ್ರಮಗಳೇನು? | ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಪರಿಸರವನ್ನು ಮಾಲಿನ್ಯದಿಂದ ಕಾಪಾಡಿಕೊಳ್ಳಲು ಜಲ(ಮಾಲಿನ್ಯ ನಿಯಂತ್ರಣ ಮತ್ತು ನಿವಾರಣೆ)ಅಧಿನಿಯಮ, 1974 ಹಾಗೂ ವಾಯು ಕಾಯ್ದೆ, 1981 ರಡಿ ಕಾನೂನಾತ್ಮಕ ಕ್ರಮಗಳನ್ನು ಜರುಗಿಸಲಾಗುತ್ತಿದೆ. |

**ಸಂಖ್ಯೆ: ಎಫ್‌ಇಇ/ 151 /ಇಪಿಸಿ /2023**

**(ಈಶ್ವರ್ ಬಿ ಖಂಡ್ರೆ)**

ಅರಣ್ಯ, ಜೀವಿಪರಿಸ್ಥಿತಿ ಹಾಗೂ ಪರಿಸರ ಸಚಿವರು.